

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಪಾಶ್ಚಾತ್ಯಸಂಸ್ಕೃತಿಯ ಆಗಸದಲ್ಲಿ ಪಂಚಾಂಗದ ನಕ್ಷತ್ರಗಳ ಹುಡುಕಾಟ!

ಒಮ್ಮೆ ಇಂಗ್ಲೆಂಡಿಗೆ ಹೋದಾಗ ಅಲ್ಲಿಯ ಶಾಲೆಗಳನ್ನು ನೋಡಬೇಕೆನಿಸಿತು. ನಾವು ವಾಸವಾಗಿದ್ದ ಶಿಷ್ಯರ ಮಗ ಚಿ. ಚೇತನ್ ಓದುವ ಶಾಲೆ Sugar Hill Primary School ಗೆ ಹೋಗುವುದೆಂದು ತೀರ್ಮಾನವಾಯಿತು. ಆ ಶಾಲೆ ಜಾರ್ಜ್ ಸ್ಟೀಫನ್‌ಸನ್ ಕಂಡುಹಿಡಿದ ಜಗತ್ತಿನ ಮೊಟ್ಟಮೊದಲ 'ಉಗಿಬಂಡಿ' ರೈಲ್ವೆಹಳಿಯ ಮೇಲೆ 'ಚುಕುಬುಕು' ಎಂದು ಪ್ರಾಯೋಗಿಕವಾಗಿ ಹರಿದಾಡಿದ ಡಾರ್ಲಿಂಗ್ಟನ್ ನಗರದ ಸಮೀಪದಲ್ಲಿತ್ತು. ಹಿಂದಿನ ದಿನವೇ ಸಮಯವನ್ನು ಗೊತ್ತುಮಾಡಿಕೊಂಡು ಆ ಶಾಲೆಗೆ ಹೋದಾಗ ಪ್ರವೇಶದ್ವಾರದಲ್ಲಿ ಮುಖ್ಯೋಪಾಧ್ಯಾಯ Mr. Frank Ridley ನಮ್ಮನ್ನು ಒಳಗೆ ಬರಮಾಡಿಕೊಂಡು ಶಾಲೆಯ ವಿವಿಧಕೊಠಡಿಗಳಿಗೆ ಕರೆದುಕೊಂಡು ಹೋದರು. ಶಾಲಾಕಟ್ಟಡ ಹೊರಗಿನಿಂದ ನೋಡಲು ಅಷ್ಟೇನೂ ಸುಂದರವಾಗಿ ಇರಲಿಲ್ಲ. ಆದರೆ ಒಳಗೆ ಪ್ರವೇಶಿಸುತ್ತಿದ್ದಂತೆಯೇ ಎತ್ತ ನೋಡಿದರೂ ಪುಸ್ತಕಗಳು, ಗಣಕಯಂತ್ರಗಳು, ಕಾರಿಡಾರ್ ಮತ್ತು ತರಗತಿಯ ಗೋಡೆಗಳ ಮೇಲೆ ಒಂದು ಇಂಚೂ ಜಾಗ ಬಿಡದಂತೆ ಅಂಟಿಸಿದ್ದ ಗುಡ್ಡಬೆಟ್ಟಗಳ, ಗಿಡಮರಗಳ, ಪ್ರಾಣಿಪಕ್ಷಿಗಳ ವರ್ಣಚಿತ್ರಗಳು, ಚಾರ್ಟ್‌ಗಳು, ಭೂಪಟಗಳು, ಬಣ್ಣ ಬಣ್ಣದ ಕಲಾಕೃತಿಗಳು. ಇದೇನು ಶಾಲೆಯೋ ಅಥವಾ ವಸ್ತುಸಂಗ್ರಹಾಲಯವೋ ಎನ್ನುವಂತೆ ಭಾಸವಾಗುತ್ತಿತ್ತು! ತರಗತಿಯೊಳಗೆ ನಮ್ಮಲ್ಲಿರುವಂತೆ ಶಿಕ್ಷಕರ ಕಡೆ ಮುಖಮಾಡಿ ಕುಳಿತುಕೊಳ್ಳುವ ಡೆಸ್ಕ್‌ಗಳು ಇರಲಿಲ್ಲ. ಹೋಟೆಲ್ ಡೈನಿಂಗ್ ಹಾಲ್‌ನಲ್ಲಿರುವ ಹಾಗೆ ಐದಾರು ಮಕ್ಕಳಿಗೆ ಒಂದೊಂದರಂತೆ ಅನೇಕ ಟೇಬಲ್‌ಗಳು ಮತ್ತು ಕುರ್ಚಿಗಳು ಅಕ್ಕಪಕ್ಕದಲ್ಲಿದ್ದು ಮಕ್ಕಳು ಟೇಬಲ್‌ಗಳ ಸುತ್ತ ಕುಳಿತುಕೊಂಡಿದ್ದರು. ಅವರ ಪುಸ್ತಕಗಳು, ಬಣ್ಣಬಣ್ಣದ ಪೆನ್ಸಿಲ್‌ಗಳು ಇತ್ಯಾದಿ ಬಳಕೆ ವಸ್ತುಗಳು ಅವರ ಟೇಬಲ್ ಮೇಲಿದ್ದು ಶಿಕ್ಷಕ/ಶಿಕ್ಷಕಿಯರು ಪ್ರತಿಯೊಂದು ಟೇಬಲ್ ಹತ್ತಿರವೂ ಹೋಗಿ ಮಕ್ಕಳಿಗೆ ಏನನ್ನೋ ಹೇಳುತ್ತಿದ್ದರು. ಮಕ್ಕಳು ಯಾವ ಅಂಜಿಕೆಯೂ ಇಲ್ಲದೆ ಶಿಕ್ಷಕರನ್ನು Mr. Ridley, Mrs. Cumming, Mrs. Collinson ಎಂದು ಅವರವರ ಹೆಸರು ಹಿಡಿದು ಕರೆದು ಪ್ರಶ್ನೆಗಳನ್ನು ಕೇಳುತ್ತಿದ್ದರು. ಶಿಕ್ಷಕರೂ ಸಹ ಅದೇ ರೀತಿ ಮಕ್ಕಳ ಹೆಸರನ್ನು ಕೂಗಿ ಕರೆದು ಆತ್ಮೀಯ ಸ್ನೇಹಿತರಂತೆ ಮಾತನಾಡಿಸುತ್ತಿದ್ದರು. ನಮ್ಮ ಶಾಲೆಗಳಲ್ಲಿ ಶಿಕ್ಷಕರ ಹೆಸರನ್ನು ಅವರ ಎದುರಿಗೆ ಹೇಳುವ ವಾಡಿಕೆ ಇಲ್ಲ. ಹಾಗೆ ಹೇಳಿದರೆ ಅದನ್ನು ಅಗೌರವವೆಂದು ಭಾವಿಸಲಾಗುತ್ತದೆ. 'ಮಾತೃದೇವೋ ಭವ, ಪಿತೃದೇವೋ ಭವ, ಆಚಾರ್ಯದೇವೋ ಭವ' ಎಂದು ತಂದೆತಾಯಿಗಳ ಮತ್ತು ಗುರುಹಿರಿಯರ ಬಗ್ಗೆ ದೈವೀಭಾವನೆ ಬೆಳೆಸುವ ಪದ್ಧತಿ ಅವರಲ್ಲಿಲ್ಲ. ನಮ್ಮಲ್ಲಿ ದೇವರನ್ನು ಏಕವಚನದಲ್ಲಿ ಮಾತನಾಡಿಸಿ ಬದುಕಬಹುದು; ಆದರೆ ಶಿಕ್ಷಕರನ್ನು ಹೆಸರು ಹಿಡಿದು ಮಾತನಾಡಿಸಿ ವಿದ್ಯಾರ್ಥಿಗಳು ಬದುಕಲಾರರು!

ನಂತರ ಬೇರೊಬ್ಬ ಶಿಷ್ಯರ ಮನೆಗೆ ಹೋದಾಗ ಶಾಲೆಯಿಂದ ಅವರ ಮಗಳು ಕು. ಹೇಮಾ ಆಗತಾನೇ ಮನೆಗೆ ಹಿಂದಿರುಗಿದ್ದಳು. ತಂದೆತಾಯಿಗಳಿಗೆ ಅಪರೂಪಕ್ಕೆ ಒಬ್ಬಳೇ ಮಗಳು. ಹತ್ತು ವರ್ಷಗಳ ಹಿಂದೆ ಹುಟ್ಟಿದಾಗ ನಮ್ಮಿಂದಲೇ ನಾಮಕರಣಗೊಂಡಿದ್ದ ಬಾಲಕಿ. ಹಳೆಯ ನೆನಪಿನ ಸುರುಳಿ ಬಿಚ್ಚಿ ಉರುಳತೊಡಗಿತು. ಅವಳ ತಂದೆ "How to name your child?" ಎಂಬ ಪುಸ್ತಕವನ್ನು ಕೊಂಡು ತಂದು ಅದರಲ್ಲಿರುವ ಸಾವಿರಾರು ಹೆಸರುಗಳಲ್ಲಿ ಅವರ ಮಗಳಿಗೆ Helena ಎಂಬ ಹೆಸರನ್ನಿಡಲು ಬಯಸಿದ್ದರು. ನಕ್ಷತ್ರ ಬಲ 'ಹ' ಬಂದಿರುವುದರಿಂದ ಹಕಾರದಿಂದ ಪ್ರಾರಂಭವಾಗುವ ಹೆಸರನ್ನೇ ಇಡಬೇಕೆಂಬ ಒತ್ತಾಸೆ ಅವರದಾಗಿತ್ತು. ಪಾಶ್ಚಾತ್ಯಸಂಸ್ಕೃತಿಯ ಆಗಸದಲ್ಲಿ ಪಂಚಾಂಗದ ನಕ್ಷತ್ರಗಳ ಹುಡುಕಾಟ! ಪಂಚಾಂಗ ನೋಡಿ ಹುಟ್ಟಿದ ನಕ್ಷತ್ರದ ಲೆಕ್ಕಾಚಾರ ಹಾಕುವಾಗ ಇಂಗ್ಲೆಂಡಿಗೂ ಭಾರತಕ್ಕೂ ಬೇಸಿಗೆ ಮತ್ತು ಚಳಿಗಾಲಗಳಲ್ಲಿ ಕಾಲಮಾನದ ದೃಷ್ಟಿಯಿಂದ ಅನುಕ್ರಮವಾಗಿ 4.30 ಗಂಟೆ ಮತ್ತು 5.30 ಗಂಟೆಗಳ ವ್ಯತ್ಯಾಸವಿದೆಯೆಂಬ ಸಂಗತಿ ಜೋಯಿಸರಿಗೆ ಗೊತ್ತಿತ್ತೋ ಇಲ್ಲವೋ ತಿಳಿಯದು! ಅಂತೂ ನಮ್ಮ ಭಾರತೀಯ ಸಂಸ್ಕೃತಿಯ ಹಿನ್ನೆಲೆಯಲ್ಲಿ ಹೆಸರಿಡಲು ನಾವು ಒಪ್ಪಿಸಿದ್ದನ್ನು

ಹೆಸರಿಲ್ಲದೆಡೆಯಿಂದ ದಣಿದು ಬಂದ ಆ ಮಗು ಗಾಢನಿದ್ರೆಯಲ್ಲಿದ್ದರೂ ಮೌನವಾಗಿ ಕೇಳಿಸಿಕೊಂಡಂತೆ ತೋರಿತು. ನಾಮಕರಣ ಮಾಡಲು ಕೈಗೆತ್ತಿಕೊಂಡಾಗ ಮಗು ಆಕಳಿಸುತ್ತಾ ಸಂಸ್ಕೃತದಲ್ಲಿ 'ಆಂ' ಎಂದು ತನ್ನ ಸಮ್ಮತಿಯನ್ನು ಸೂಚಿಸಿದಂತಿತ್ತು! 'ಹೆಲೆನಾ' ಎಂಬುದರ ಬದಲು 'ಹೇಮಾ' ಎಂದು ನಾಮಕರಣಗೊಂಡ ಆ ಕೂಸು ಈಗ ಶಾಲೆಗೆ ಹೋಗುವ ಬಾಲೆಯಾಗಿ ಬೆಳೆದಿದ್ದಳು.

ಈ ಸೃಷ್ಟಿಯಲ್ಲಿ ಮಕ್ಕಳು ಬೆಳೆಯುವುದನ್ನು ನೋಡುವುದೇ ಒಂದು ಸೋಜಿಗ! ಶಾಲೆಯಲ್ಲಿ ಆ ದಿನ ಏನು ನಡೆಯಿತು ಎಂದು ಕು. ಹೇಮಾಳನ್ನು ಕೇಳಿದೆವು. ಅವಳು ತನ್ನ ಹೋಂವರ್ಕ್ ಪುಸ್ತಕವನ್ನು ತೋರಿಸಿದಳು. ಅವಳ ಶಿಕ್ಷಕಿ 'ನಿನಗೆ ಅತ್ಯಂತ ಪ್ರಿಯವಾದ ಕವಿತೆ ಯಾವುದು? ಯಾರ ಕವಿತೆ ಅದು? ಬರೆದುಕೊಂಡು ಬಾ. ಏಕೆ ಅದು ನಿನಗೆ ಹೆಚ್ಚು ಪ್ರಿಯ? ವಿವರಿಸು' ಎಂದು ಹೋಂವರ್ಕ್ ಕೊಟ್ಟಿದ್ದರಂತೆ. ಅದಕ್ಕೆ ಆ ಬಾಲಕಿ ಗ್ರಂಥಾಲಯದಲ್ಲಿದ್ದ ಅನೇಕ ಇಂಗ್ಲೀಷ್ ಕವಿತೆಗಳ ಪುಸ್ತಕಗಳನ್ನು ಓದಿ ತನಗೆ ಮೆಚ್ಚುಗೆಯಾದ ಒಂದು ಕವಿತೆಯನ್ನು ಬರೆದುಕೊಂಡು ಹೋಗಿ ಶಿಕ್ಷಕಿಯ ಮುಂದೆ ಓದಿಹೇಳಿದಳಂತೆ. ಅಪ್ಪಟ 'Queen's English' ನಲ್ಲಿ ನಮ್ಮ ಎದುರಿಗೂ ಅದನ್ನು ಓದಿ ಹೇಳಿದಳು. ಆ ಇಂಗ್ಲೀಷ್ ಕವಿತೆಯ ನಮ್ಮ ಕನ್ನಡ ಭಾವಾನುವಾದ ಹೀಗಿದೆ:

**ಶಿಕ್ಷಕರು**

**ಅಮ್ಮಾ ಏನ ಹೇಳಲಿ ನಿನಗೆ**
**ನಮ್ಮೀ ಶಿಕ್ಷಕರ ಬೋಧನೆ ಅರ್ಥವಾಗದೆನಗೆ !**

**ನಿಮ್ಮ ಬರಹ ಸ್ಫುಟವಾಗಿ, ಅಂದವಾಗಿರಬೇಕೆನ್ನುವರು**
**ನಂತರ ಅವರೇ ಕೆಂಪುಮಸಿ ಲೇಖನಿ ಹಿಡಿದು**
**ಅಲ್ಲಲ್ಲಿ ಗೀಚಿ 'ರಕ್ತದೋಕುಳಿ' ಮಾಡಿ**
**ನಮ್ಮ ಹೋಂವರ್ಕ್ ಪುಸ್ತಕವ ಅಂದಗೆಡಿಸುವರು!**

**ಪಾಠಮಾಡುವ ಮಧ್ಯೆ ತಲೆಹಾಕದೆ**
**ಕೈ ಎತ್ತಿ ಕಾಯಬೇಕೆನ್ನುವರು ನಮಗೆ**
**ಅವರು ಮಾತ್ರ ಹೇಳಬೇಕೆನಿಸಿದಾಗಲೆಲ್ಲ ಮೂಗುತೂರಿಸಿ**
**ಮಾತುಮಾತಿಗೂ ನಮ್ಮ ಬಾಯಿ ಮುಚ್ಚಿಸುವರು!**

**ಪಾಠ ಎಷ್ಟು ಮುಖ್ಯವೋ ಆಟವೂ ಅಷ್ಟೇ ಮುಖ್ಯ**
**ಮಕ್ಕಳೇ ನಲಿದಾಡಿ ವಿಶ್ರಮಿಸಿ ಎನ್ನುವರು**
**ಅವರ ಆಶಯದಂತೆ ಕುಣಿದು ಕುಪ್ಪಳಿಸಿ ಆಟವಾಡಿ ಹೋದರೆ**
**ಹೋಂವರ್ಕ್ ಮಾಡಿಲ್ಲವೆಂದು ಶಾಲೆಯಲಿ ದಂಡಿಸುವರು!**

**ಏನಾದರೂ ಬರೆಯುವ ಮುನ್ನ**
**ನಿಧಾನವಾಗಿ ಆಲೋಚಿಸಿ ಬರೆಯಿರಿ ಎನ್ನುವರು**
**ಪರೀಕ್ಷೆಯಲ್ಲಿ ಮಾತ್ರ ಬಿಗಿಯಾಗಿ ಕೂರಿಸಿ**
**ನಮಗಿಷ್ಟವಿಲ್ಲದ ಪ್ರಶ್ನೆಗಳನ್ನು ಕೊಟ್ಟು**
**ಒಂದುಗಂಟೆಯೊಳಗೆ ಉತ್ತರ ಬರೆದು ಮುಗಿಸಿ ಎನ್ನುವರು!**

**ಅಮ್ಮಾ ಏನ ಹೇಳಲಿ ನಿನಗೆ**
**ನಮ್ಮೀ ಶಿಕ್ಷಕರ ಬೋಧನೆ ಅರ್ಥವಾಗದೆನಗೆ ! (- John Foster)**

ಈ ಪದ್ಯದಲ್ಲಿ ನೀವು ಗಮನಿಸಿದಂತೆ ಶಿಕ್ಷಕರ ವರ್ತನೆಯನ್ನು ಲೇವಡಿಮಾಡಲಾಗಿದೆ. ಆದರೂ ಆ ಶಿಕ್ಷಕಿ ಅದನ್ನು ವೈಯಕ್ತಿಕವಾಗಿ ತೆಗೆದುಕೊಳ್ಳದೆ ಪದ್ಯದ ಪಕ್ಕದಲ್ಲಿ "You certainly brought this poem to life for me. Voice was colourful, with emphatic use of stress. Facial play supported the text. Diction was secure. There was a pleasing sense of imagination here!" ಎಂದು ಮೆಚ್ಚಿ ಬರೆದಿದ್ದರು. ಉಳಿದ ಹೋಂವರ್ಕ್ ನೋಡಿ 'Promising Work! Congratulations! Well Done!' ಎಂದೆಲ್ಲಾ ಅಭಿನಂದಿಸಿ ಬರೆದು 85 ಅಂಕಗಳನ್ನು ಕೊಟ್ಟಿದ್ದರು. "ಗುರುರ್ಬ್ರಹ್ಮಾ ಗುರುರ್ವಿಷ್ಣುಃ ಗುರುರ್ದೇವೋ ಮಹೇಶ್ವರಃ" ಎಂದು ಕಲಿಸಿಕೊಡುವ ನಮ್ಮ ಶಾಲೆಗಳಲ್ಲಿ ಮಕ್ಕಳು ಹೀಗೆ ಶಿಕ್ಷಕರನ್ನು ಟೀಕಿಸುವ ಪದ್ಯವನ್ನು ಬರೆದುಕೊಂಡು ಹೋದರೆ ನಮ್ಮ ಶಾಲಾ'ಗುರು'ಗಳು ಕಣ್ಣು ಕೆಂಪಗೆ ಮಾಡಿ 'ಗುರ್' ಎನ್ನದೇ ಇರುವರೇ? ಪೋಲೀಸರಂತೆ ನಿರ್ದಯರಾಗಿ 'ಲಾಠಿಪ್ರಹಾರ' ನಡೆಸಿ ಮಕ್ಕಳ ಕಣ್ಣಿನಲ್ಲಿ 'ಅಶ್ರುಧಾರೆ' ಹರಿಯುವಂತೆ, ಒಮ್ಮೊಮ್ಮೆ ಕಣ್ಣೀ

ಹೋಗುವಂತೆ ಮಾಡಿದ ಉದಾಹರಣೆಗಳಿವೆ. ಇದರಿಂದ ಪೋಷಕರು ಕಾನೂನು ಸಮರ ಸಾರಿದರೆ ಶಾಲೆಯನ್ನು ನಡೆಸುವ ಆಡಳಿತ ಮಂಡಳಿಯವರು ಕಣ್ ಕಣ್ ಬಿಡುವ ಹೊತ್ತು ಬರುತ್ತದೆ!

ನಮ್ಮ ದೇಶದ ಜನರು ತಾವು ಕುಳಿತ ಸ್ಥಾನದಿಂದಾಗಿ ಮಾನ(ಗೌರವ)ವನ್ನು ನಿರೀಕ್ಷಿಸುತ್ತಾರೆಯೇ ಹೊರತು ಆ ಸ್ಥಾನದಲ್ಲಿ ಕುಳಿತು ಎಷ್ಟರಮಟ್ಟಿಗೆ ಆ ಮಾನಸನ್ಮಾನಗಳಿಗೆ ಅರ್ಹರು ಎಂದು ಆತ್ಮನಿರೀಕ್ಷೆ ಮಾಡಿಕೊಳ್ಳುವುದಿಲ್ಲ. ಆ ಸ್ಥಾನಕ್ಕೆ ತಕ್ಕ ಯೋಗ್ಯತೆಯನ್ನು ಸಂಪಾದಿಸುವ ಪ್ರಯತ್ನವನ್ನೂ ಮಾಡುವುದಿಲ್ಲ. 'ಪಟ್ಟವ ಕಟ್ಟಿದ ಬಳಿಕ ಲಕ್ಷಣವನರಸುವರೆ?', 'ತಲೆಯಿಲ್ಲದ ಅಟ್ಟೆಗೆ ಪಟ್ಟವ ಕಟ್ಟುವ ಉಭಯ ಭ್ರಷ್ಟರ ಮೆಚ್ಚುವನೆ ನಮ್ಮ ಕೂಡಲಸಂಗಮದೇವ?' ಎನ್ನುವ ಬಸವಣ್ಣನವರ ವಚನಗಳ ಸಾಲು ನೆನಪಾಗುತ್ತವೆ. ದೇವರ ಫೋಟೋ ನೋಡಿ ಭಕ್ತರು ನಮಸ್ಕರಿಸಿದರೆ ಅದನ್ನು ಹೊತ್ತುಕೊಂಡ ಕತ್ತೆ ತನಗೇ ನಮಸ್ಕರಿಸುತ್ತಿದ್ದಾರೆಂದು ತಿಳಿದುಕೊಂಡ ಭ್ರಾಮಕ ಮನಃಸ್ಥಿತಿ ! ಫೋಟೋ ಕೆಳಗಿಳಿಸಿದ ಮೇಲೆ ಜನರು ತನಗೆ ಲತ್ತೆ ಕೊಟ್ಟು ಓಡಿಸುತ್ತಾರೆಂಬ ಪರಿವೆ ಇಂತಹ ಕತ್ತೆಗಳಿಗೆ ಇರುವುದಿಲ್ಲ. ಉತ್ತಮ ಶಿಕ್ಷಕನ ಗುಣಲಕ್ಷಣಗಳು ಏನೆಂಬುದಕ್ಕೆ ವಿವಿಧಮೂಲಗಳಿಂದ ಕ್ರೋಢಿಕರಿಸಿದ ಈ ಕೆಳಗಿನ ನೀತಿವಾಕ್ಯಗಳನ್ನು ಗಮನಿಸಿ:

- **ಸಾಮಾನ್ಯ ಶಿಕ್ಷಕ ವಿದ್ಯಾರ್ಥಿಗಳಿಗೆ ಬರೀ ಹೇಳುತ್ತಾನೆ. ಒಳ್ಳೆಯ ಶಿಕ್ಷಕ ವಿವರಿಸುತ್ತಾನೆ. ಉತ್ತಮ ಶಿಕ್ಷಕ ತೋರಿಸುತ್ತಾನೆ. ಅತ್ಯುತ್ತಮ ಶಿಕ್ಷಕ ಸ್ಫೂರ್ತಿಯುಂಟಾಗುವಂತೆ ಮಾಡುತ್ತಾನೆ.**
- **ವಿದ್ಯಾರ್ಥಿಗಳು ಕೇಳುವ ಪ್ರಶ್ನೆಗಳಿಗೆಲ್ಲಾ ಉತ್ತರ ನೀಡಬಲ್ಲ ಶಿಕ್ಷಕ ಉತ್ತಮ ಶಿಕ್ಷಕ ನಿಜ. ಆದರೆ ತಾನು ಉತ್ತರಿಸಲಾಗದಂತಹ ಪ್ರಶ್ನೆಗಳನ್ನು ಕೇಳುವಂತೆ ವಿದ್ಯಾರ್ಥಿಗಳಿಗೆ ಸ್ಫೂರ್ತಿ ನೀಡುವವನು ಅವನಿಗಿಂತಲೂ ಅತ್ಯುತ್ತಮನಾದ ಶಿಕ್ಷಕ ಎನ್ನಬಹುದು.**
- **ವಿದ್ಯಾರ್ಥಿಗಳ ಮನಸ್ಸಿನಲ್ಲಿ ಸ್ಫೂರ್ತಿಯುಂಟಾಗುವಂತೆ ಪಾಠಮಾಡುವುದು ಕಾದ ಕಬ್ಬಿಣವನ್ನು ಬಡಿದಂತೆ!**
- **ಪಾಠ ಮಾಡ ಬಯಸುವ ಶಿಕ್ಷಕರು ನಿರಂತರ ಓದುವ ಹವ್ಯಾಸವನ್ನು ರೂಢಿಸಿಕೊಳ್ಳಬೇಕು.**
- **ಶಿಕ್ಷಣದ ಮೂಲ ಉದ್ದೇಶ ವಿಷಯಗಳನ್ನು ವಿದ್ಯಾರ್ಥಿಗಳ ತಲೆಯಲ್ಲಿ ತುರುಕುವುದಲ್ಲ. ಅವುಗಳ ಬಗ್ಗೆ ಚಿಂತನೆ ಮಾಡುವಂತೆ ಕಲಿಸುವುದು.**
- **ವಿದ್ಯಾರ್ಥಿಗಳಿಗೆ ಏನನ್ನು ಚಿಂತಿಸಬೇಕು ಎಂದು ಕಲಿಸಿಕೊಡುವುದಕ್ಕಿಂತ ಹೇಗೆ ಚಿಂತಿಸಬೇಕು ಎಂಬುದನ್ನು ಕಲಿಸಿಕೊಡುವವನೇ ಉತ್ತಮಶಿಕ್ಷಕ.**
- **ವಿದ್ಯಾರ್ಥಿಗಳ ಮನಸ್ಸು ವಿಷಯಗಳನ್ನು ತುಂಬಲು ಇರುವ ಪಾತ್ರೆಯಲ್ಲ; ವಿಚಾರಗಳು ಪ್ರಜ್ವಲಿಸುವಂತೆ ಹೊತ್ತಿಸಬೇಕಾದ ಅಗ್ನಿಕುಂಡ.**
- **ಉತ್ತಮ ಶಿಕ್ಷಕ ಹೃದಯದಿಂದ ಪಾಠ ಮಾಡುತ್ತಾನೆ, ಪುಸ್ತಕದಿಂದ ಅಲ್ಲ.**
- **ಉತ್ತಮ ಶಿಕ್ಷಕ ಬಹಳ ದುಬಾರಿ. ಕೆಟ್ಟ ಶಿಕ್ಷಕ ಬಹಳ ಅಪಾಯಕಾರಿ.**

ಸ್ವಾತಂತ್ರ್ಯಪೂರ್ವದಿಂದಲೂ ಗ್ರಾಮೀಣಶಿಕ್ಷಣಕ್ಕೆ ಆದ್ಯತೆ ನೀಡಿ ಹಳ್ಳಿಹಳ್ಳಿಗಳಲ್ಲಿ ಶಾಲಾಕಾಲೇಜುಗಳನ್ನು ಸ್ಥಾಪಿಸಿದ ನಮ್ಮ ಗುರುವರ್ಯರು "ಶಿಕ್ಷಣದಲ್ಲಿ ಪರಿವರ್ತನೆಯಾಗದೆ ಜಗತ್ತಿಗೆ ಸುಖವಿಲ್ಲ. ವಿದ್ಯಾರ್ಥಿಗಳಿಗೆ ಔದ್ಯೋಗಿಕ, ವ್ಯಾವಹಾರಿಕ, ಆಧ್ಯಾತ್ಮಿಕ ಈ ಮೂರು ಶಿಕ್ಷಣಗಳನ್ನು ಕೊಡಬೇಕು" ಎಂದು 1937 ರಷ್ಟು ಹಿಂದೆಯೇ ತಮ್ಮ "ಆತ್ಮನಿವೇದನೆ"ಯಲ್ಲಿ ಬರೆದಿರುತ್ತಾರೆ. ಅಮೇರಿಕಾದ ಅಧ್ಯಕ್ಷ ಅಬ್ರಹಾಂ ಲಿಂಕನ್ ತನ್ನ ಮಗ ಓದುತ್ತಿದ್ದ ಶಾಲೆಯ ಮುಖ್ಯೋಪಾಧ್ಯಾಯರಿಗೆ ಬರೆದಿದ್ದನೆನ್ನಲಾದ ಪತ್ರದ ಆಯ್ದ ಭಾಗವನ್ನು ಭಾವಾನುವಾದ ಮಾಡಿ ಈ ಕೆಳಗೆ ಕೊಟ್ಟಿದೆ.

**ಜಗದ ಜನರೆಲ್ಲರೂ ಸತ್ಯಸಂಧರಲ್ಲ**
**ನ್ಯಾಯಪರರಲ್ಲವೆಂದು ನನ್ನ ಮಗ**
**ಕಲಿಯಬೇಕೆಂಬುದನು ನಾ ಬಲ್ಲೆ**
**ಆದರೆ ಕಲಿಸಿರಿ ಅವನಿಗೆ**
**ಈ ಜಗತ್ತಿನಲ್ಲಿ ಒಬ್ಬ ಪಟಿಂಗನಿದ್ದಂತೆ**
**ಒಬ್ಬ ಒಳ್ಳೆಯ ನಾಯಕನೂ ಇದ್ದಾನೆಂಬುದ!**
**ಒಬ್ಬ ಕೆಟ್ಟ ರಾಜಕಾರಿಣಿ ಇದ್ದಂತೆ**
**ಒಬ್ಬ ಧೀರೋದಾತ್ತ ನೇತಾರನೂ ಇರುವನೆಂಬುದ!**
**ಒಬ್ಬ ಶತ್ರುವಿದ್ದಂತೆ ಒಬ್ಬ ಮಿತ್ರನೂ ಇದ್ದಾನೆಂಬುದ!**

**ಕಲಿಸಿರಿ ನನ್ನ ಮಗನಿಗೆ**
**ಅಸೂಯೆಯಿಂದ ದೂರವಿದ್ದು ನಗುವ ರಹಸ್ಯವ**
**ಮೋಸದ ಗಳಿಕೆಯ ನೂರು ಡಾಲರಿಗಿಂತ**

ಶ್ರಮದ ಗಳಿಕೆಯ ಒಂದು ಡಾಲರ್ ಮಿಗಿಲೆಂಬುದ!

ಕಲಿಸಿರಿ ನನ್ನ ಮಗನಿಗೆ ಪುಸ್ತಕಗಳ ಸೋಜಿಗವ!
ಕಲಿಸಿರಿ ಚಿಂತಿಸಲು ಶಾಂತಚಿತ್ತದಿ ನಿತ್ಯ ನಿಗೂಢವ -
ಬಾನಿನೊಳಗೆ ಹಾರುವ ಹಕ್ಕಿಗಳ!
ನೇಸರನ ಹೊಂಗಿರಣದಪ್ಪುಗೆಯ ಹಸಿರು ಬೆಟ್ಟಗಳ!
ಕಿಲ ಕಿಲನೆ ನಗುವ ಹೂಗಳ ಮೇಣ್
ಝೇಂಕರಿಸಿ ಚುಂಬಿಸುವ ದುಂಬಿಗಳ!

ಕಲಿಸಿರಿ ನನ್ನ ಮಗನಿಗೆ ಶಾಲೆಯಲಿ
ಮೋಸದಿಂದ ಪಾಸಾಗುವುದಕ್ಕಿಂತ
ಗೌರವದಿಂದ ಫೇಲಾಗುವುದೊಳಿತೆಂದು!
ಕಲಿಸಿಕೊಡಿರಿ ನನ್ನ ಮಗನಿಗೆ
ಯಾರು ಎಷ್ಟೇ ಹೀಗಳೆದರೂ
ತಾನು ನಂಬಿದ ತತ್ವಗಳ ಕೈಬಿಡದೆ ಮುಂದೆ ಸಾಗುವುದನು!
ಕಲಿಸಿರಿ ಅವನಿಗೆ: ಒಳ್ಳೆಯವರಿಗೆ ಒಳ್ಳೆಯವನಾಗಿರುವುದನು
ಕೆಟ್ಟವರಿಗೆ ಸಿಂಹಸ್ವಪ್ನವಾಗುವುದನು!

ಕಲಿಸಿರಿ ನನ್ನ ಮಗನಿಗೆ
ತನ್ನ ದುಃಖದುಮ್ಮಾನಗಳ ನಡುವೆಯೂ ನಗುವುದು ಹೇಗೆಂದು!
ತಿಳಿಹೇಳಿರಿ ಅವನಿಗೆ: ಕಣ್ಣೀರಿನಲಿ ನಾಚಿಕೆ ಇಲ್ಲವೆಂದು!
ಕಲಿಸಿರಿ: ನಿಂದನೆಯ ಮಾತುಗಳನ್ನು ಕೇಳಿ ನಗುವುದನು
ತಿಳಿಹೇಳಿರಿ: ಅತಿಯಾದ ಸಿಹಿಮಾತುಗಳಿಂದ ಎಚ್ಚರದಿಂದಿರಲು
ತನ್ನ ಬುದ್ಧಿಶಕ್ತಿಸಾಮರ್ಥ್ಯಗಳನ್ನು ಹೆಚ್ಚಿನ ಬೆಲೆಗೆ ಮಾರಿದರೂ
ತನ್ನಾತ್ಮ ಹೃದಯಗಳನ್ನು ಮಾತ್ರ ಎಂದೂ ಬೆಲೆಕಟ್ಟಿ ಮಾರದಿರಲು!

ಈ ಪತ್ರವನ್ನು ಲಿಂಕನ್ ಬರೆದಿಲ್ಲವೆಂದು ಲಿಂಕನ್ ಸಾಹಿತ್ಯ ಪರಿಣತರು ಇತ್ತೀಚೆಗೆ ತೀರ್ಮಾನಿಸಿದ್ದಾರೆ. ಇದನ್ನು ಯಾರೇ ಬರೆದಿರಲಿ, ಇದರಲ್ಲಿರುವ ನೀತಿಬೋಧೆಯನ್ನು ನಿಮ್ಮ ಮಕ್ಕಳಿಗೆ ತಿಳಿಹೇಳುವುದನ್ನು ಮಾತ್ರ ಮರೆಯಬೇಡಿ. ನಮ್ಮ ಅನುಭವದಲ್ಲಿ ಕ್ರೀಡಾಂಗಣದಲ್ಲಿ ಎದುರಾಳಿಯು ಬೀಸಿದ ಚೆಂಡು ತನ್ನೆಡೆಗೆ ಧಾವಿಸಿ ಬಂದಂತೆ ಜೀವನದಲ್ಲಿ ಸವಾಲುಗಳು ಒಂದಾದ ಮೇಲೊಂದರಂತೆ ಎರಗಿಬರುತ್ತವೆ. ಅವುಗಳನ್ನು ಎದೆಗುಂದದೆ ಸ್ವೀಕರಿಸಿ ಪ್ರತಿಧಾಳಿಮಾಡುವ ಆತ್ಮವಿಶ್ವಾಸವನ್ನು ಹೊಂದಿರಬೇಕು. ಸವಾಲಾಗಿ ಬಂದ ಚೆಂಡು ಕೈತಪ್ಪಿ ಬೀಳದಂತೆ ಎಚ್ಚರ ವಹಿಸಬೇಕು. 'ಚೆಂಡ'ನ್ನು ಹಿಂತಿರುಗಿಸುವಾಗ ಮಾತ್ರ ನುರಿತ ಆಟಗಾರನಂತೆ ಆಡಿ ಜೀವನದ 'ಅಂಪೈರ್' ಆದ ದೇವರು ಯಾರು ಎಷ್ಟೇ ವಿರೋಧಿಸಿ ಕೂಗಾಡಿದರೂ ಲೆಕ್ಕಿಸದೆ 'Good Ball !' ಎಂದು 'declare' ಮಾಡುವಂತಿರಬೇಕು!

14.1.2009

ಶ್ರೀ ತರಳಬಾಳು ಜಗದ್ಗುರು
ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑